# ಕಾರೈಕ್ಕಾಲ್ ಅಮ್ಮೈಯಾರ್

ಸ್ವರ್ಣಗೌರಿ

ಭಕ್ತಿ, ಪಾವಿತ್ರ್ಯ, ವೈರಾಗ್ಯಗಳಿಂದ ಶೋಭಿಸುವ ಅಮ್ಮೈಯಾರರ ಅಪೂರ್ವ ಜೀವನವನ್ನು ಸಂಕ್ಷಿಪ್ತವಾಗಿ ಚಿತ್ರಿಸಿರುವ ಸ್ವರ್ಣ ಗೌರಿಯವರು ಮೈಸೂರು ರಾಮಕೃಷ್ಣ ಆಶ್ರಮದ ನಿಕಟ ಭಕ್ತರು.



"ಹೇ! ಸರ್ವಶಕ್ತ ಭಗವಂತನೆ! ಅತ್ಯಂತ ಚೆಲುವಾದ ನನ್ನ ಈ ದೈಹಿಕ ಸೌಂದರ್ಯವನ್ನೆಲ್ಲಾ ತೆಗೆದುಕೊಂಡು, ನಿನ್ನ ಸುತ್ತಲೂ ಭಕ್ತಿಯಿಂದ ಕುಣಿಯುವ ಆ ಭೂತಗಣಗಳ ರೂಪವನ್ನು ನೀಡು" ಎಂದು ಶಿವನ ಪರಮಭಕ್ತಳೂ, ಅನುಪಮ ಸುಂದರಿಯೂ ಆದ ಪುನಿದವತಿಯು ಶಿವನನ್ನು ಕುರಿತು ಭಕ್ತಿಯಿಂದ ಪ್ರಾರ್ಥಿಸಿದಳು.

ಇದೆಂತಹ ಪ್ರಾರ್ಥನೆ? ಕುರೂಪಿಯಾಗಿಯೇ ಹುಟ್ಟುವುದು ಸಹಜ. ಆದರೆ ಸಹಜ ಸೌಂದರ್ಯವನ್ನೇ ತ್ಯಜಿಸಿ ಭೂತದ ರೂಪವನ್ನು ಬಯಸುವುದುಂಟೇ? ಭಕ್ತರ ನಡುವಳಿಕೆ, ಕೋರಿಕೆಗಳು ವಿಚಿತ್ರ, ಲೋಕರೂಢಿಗೆ ವಿರುದ್ಧ. ಆಕೆಯ ಪತಿ, ಬಂಧುಬಾಂಧವರೆಲ್ಲಾ ಬೆರಗಾಗಿ ನೋಡುತ್ತಿದ್ದಂತೆಯೇ ಪುನಿದವತಿಯ ಸೌಂದರ್ಯವು ಪ್ರಾಪಂಚಿಕ ದೃಷ್ಟಿಗೆ ಭಯಂಕರವೂ, ಅಸಹ್ಯಕರವೂ ಆದ ಭೂತದ ರೂಪಕ್ಕೆ ಪರಿವರ್ತಿತವಾಯಿತು. ಈ ಅಮೋಘವಾದ ದೈವಭಕ್ತಿಗೆ ಮೆಚ್ಚಿದ ದೇವತೆಗಳು ಪುಷ್ಪವೃಷ್ಟಿ ಗೈದರು, ಮನೋಹರವಾದ ಗಾನವು ದಿಗಂತವನ್ನೆಲ್ಲಾ ವ್ಯಾಪಿಸಿತು.

ಇಂತಹ ಅದ್ಭುತ ಪ್ರಾರ್ಥನೆಯನ್ನು ಮಾಡಿದ ಈ ದೈವಭಕ್ತಳ ಜೀವನವೂ ಅದ್ಭುತ ಹಾಗೂ ರೋಮಾಂಚಕಾರಿ. ಪುನಿದವತಿ ಎಂದರೆ "ಪವಿತ್ರಳು" ಎಂದರ್ಥ. ಬಾಲ್ಯದಿಂದಲೇ ಶಿವನಲ್ಲಿ ಅನುರಕ್ತಳಾದ ಪುನಿದವತಿಯು ಶಿವನಾಮವನ್ನು ಕೇಳುತ್ತಲೇ ಆನಂದಪರವಶಳಾಗುತ್ತಿದ್ದಳು. ತಮಿಳುನಾಡಿನ ತಂಜಾವೂರು ಜಿಲ್ಲೆಯ ಬಳಿ ಕಾರೈಕ್ಕಲ್ ಎಂಬ ರೇವು ಪಟ್ಟಣದಲ್ಲಿ ದಾನದತ್ತ ಎಂಬ ಪ್ರಸಿದ್ಧ ವ್ಯಾಪಾರಿಯ ಏಕೈಕ ಪುತ್ರಿ ಈಕೆ. ಶ್ರೀಮಂತ ಕುಟುಂಬದಲ್ಲಿ ಜನಿಸಿದ ಈಕೆಗೆ ಯಾವುದರ ಕೊರತೆಯೂ ಇರಲಿಲ್ಲ. ಆದರೆ ಆಕೆಯ ಬಾಲ್ಯವೆಲ್ಲಾ ಕೇವಲ ಶಿವನನ್ನು ಅರ್ಚಿಸುವುದು, ಹಾಡುವುದು, ಶಿವಭಕ್ತರ ಸೇವೆ ಮಾಡುವುದು ಇವುಗಳಲ್ಲೇ ಕಳೆದುಹೋಯಿತು. ಅವಳ ದೈವದತ್ತವಾದ ಸೌಂದರ್ಯವೂ ದಿನಗಳೆದಂತೆ ವೃದ್ಧಿಯಾಯಿತು. ನವಯೌವ್ವನೆಯಾದ ಮಗಳನ್ನು ನೆರೆಯಲ್ಲೇ ಇದ್ದ ಮತ್ತೊಂದು ರೇವು ಪಟ್ಟಣದ ಪ್ರಸಿದ್ಧ, ಶ್ರೀಮಂತ ವ್ಯಾಪಾರಿಯ ಮಗನಾದ ಪರಮದತ್ತನಿಗಿತ್ತು ಅತ್ಯಂತ ವೈಭವದಿಂದ ವಿವಾಹವನ್ನು ನಡೆಸಿದರು ತಂದೆ. ಒಬ್ಬಳೇ ಮಗಳನ್ನು ತೊರೆದು ಬದುಕಲಾರದ ದಾನದತ್ತನು ಅಳಿಯನನ್ನು ತನ್ನೊಡನೆ ಇರಿಸಿಕೊಂಡ. ಸುಮಂಗಲಿಯಾದ ಪ್ರತಿ ಹೆಣ್ಣಿಗೂ ಪತಿಯೇ ಪರದೈವ. ಆತನ ಸೇವೆಯೇ ಪರಮಧರ್ಮ. ಪುನಿದವತಿಯೂ ಇದಕ್ಕೆ ಹೊರತಾಗಿರಲಿಲ್ಲ. ಸದಾ ಪತಿಯ ಇಚ್ಛೆಗಳನ್ನು ಪೂರೈಸುತ್ತಾ ಆತನನ್ನು ಸಂತೋಷಪಡಿಸುವುದೇ ತನ್ನ ಕರ್ತವ್ಯ ಎಂದರಿತು ನವಜೀವನವನ್ನು ಪ್ರಾರಂಭಿಸಿದಳು. ಆದರೆ ಬಾಲ್ಯದಿಂದಲೇ ಶಿವನ ಮೇಲಿದ್ದ ಅನುರಾಗವು ಮತ್ತಷ್ಟು ವೃದ್ಧಿಯಾಯಿತು. ಮನೆಗೆ ಬಂದ ಶಿವಭಕ್ತರ ಸೇವೆಯನ್ನು ಶ್ರದ್ಧಾಭಕ್ತಿಗಳಿಂದ ಮಾಡಿ ದಾನಧರ್ಮಗಳನ್ನು ಯಥೇಚ್ಛವಾಗಿ ಮಾಡುತ್ತಾ ಆನಂದದಿಂದ ಕಾಲ ಕಳೆಯತೊಡಗಿದಳು. ಪತಿಯು ದೈವಭಕ್ತನಲ್ಲದಿದ್ದರೂ ಪತ್ನಿಯ ಶಿವಭಕ್ತಿಯನ್ನು ವಿರೋಧಿಸುತ್ತಿರಲಿಲ್ಲ.

ಒಂದು ದಿನ ಪರಮದತ್ತನು ತನ್ನ ವ್ಯಾಪಾರದ ಸ್ಥಳದಲ್ಲಿದ್ದಾಗ ಅವನ ಬಳಿಗೆ ಭೇಟಿಗಾಗಿ ಬಂದ ಕೆಲವರು ಎರಡು ರುಚಿಕರವಾದ ಮಾವಿನ ಹಣ್ಣನ್ನು ಕೊಟ್ಟರು. ಅವುಗಳನ್ನು ತನ್ನ ಸೇವಕನ ಮೂಲಕ ಪತ್ನಿಗೆ ಕಳಿಸಿಕೊಟ್ಟನು. ಆ ಹಣ್ಣುಗಳನ್ನು ಜೋಪಾನವಾಗಿ ಒಳಗಿಟ್ಟ ಪುನಿದವತಿಯು ಹಸಿವಿನಿಂದ ಬಂದ ವಯಸ್ಸಾದ ಶಿವಭಕ್ತನ ಸೇವೆ, ಶುಶ್ರೂಷೆಯಲ್ಲಿ ತೊಡಗಿದಳು. ಆಗ ಅಡಿಗೆಯು ಇನ್ನೂ ಸಿದ್ಧವಾಗಿರಲಿಲ್ಲ, ಕೇವಲ ಅನ್ನ ಬೇಯಿಸಿಯಾಗಿತ್ತು. ಅನ್ನವನ್ನು ಬಡಿಸಿ ಪತಿಯು ಕಳುಹಿಸಿದ ಒಂದು ಮಾವಿನ ಹಣ್ಣನ್ನು ಅವನಿಗೆ ಬಡಿಸಿದಳು. ಆಕೆಯ ಪ್ರೇಮಾದರಗಳಿಂದ ಸಂತುಷ್ಟನಾದ ಮುದುಕನು ಪ್ರೀತಿಯಿಂದ ಹರಸುತ್ತಾ ಹೊರಟುಹೋದನು.

ಇತ್ತ ಮಧ್ಯಾಹ್ನ ಊಟಕ್ಕೆ ಬಂದ ಪತಿಗೆ ವಿವಿಧ ರುಚಿಕರವಾದ ಭಕ್ಷ್ಯ ಭೋಜ್ಯಗಳನ್ನು ಬಡಿಸಿ ಉಳಿದ ಒಂದು ಮಾವಿನ ಹಣ್ಣನ್ನು ತಂದು ಬಡಿಸಿದಳು. ತುಂಬ ರುಚಿಕರವಾದ ಆ ಹಣ್ಣನ್ನು ತಿಂದ ಪತಿಯು ಮತ್ತೊಂದನ್ನು ತರಲು ಹೇಳಿದನು. ಒಂದು ಕ್ಷಣ ದಿಗ್ಭ್ರಾಂತಳಾದ ಪುನಿದವತಿಯು ಒಳಹೋಗಿ ಅತ್ಯಂತ ದೀನಳಾಗಿ ಭಕ್ತಿಯಿಂದ ಶಿವನನ್ನು ಪ್ರಾರ್ಥಿಸತೊಡಗಿದಳು. ಏನಾಶ್ಚರ್ಯ! ಅವಳ ಕೈಯಲ್ಲಿ ಒಂದು ಮಾವಿನ ಹಣ್ಣು ಪ್ರತ್ಯಕ್ಷವಾಯಿತು. ಆನಂದದಿಂದ ತಂದು ಬಡಿಸಿದಳು. ಮೊದಲಿನ ಹಣ್ಣಿಗಿಂತ ರುಚಿಕರವಾದ ಆ ಹಣ್ಣನ್ನು ತಿಂದ ಪರಮದತ್ತನಿಗೆ ಏನೋ ಸಂಶಯವುಂಟಾಗಿ ಅದು ಎಲ್ಲಿಂದ ಬಂದಿತೆಂದು ಕೇಳಿದನು. ಈಗ ಧರ್ಮಸಂಕಟದಲ್ಲಿ ಸಿಲುಕಿದಳು ಪುನಿದವತಿ. ಭಕ್ತರು ತಮ್ಮ ಮೇಲಾದ ಭಗವತ್‌ಕೃಪೆಯ ಬಗ್ಗೆ ಎಲ್ಲರೊಡನೆಯೂ ಮಾತನಾಡಬಾರದೆಂಬ ನಿಯಮವನ್ನೂ ಪಾಲಿಸಬೇಕು, ಮತ್ತೆ ಪತಿವ್ರತಾ ಸ್ತ್ರೀಯಾದ ಆಕೆಯು ಪತಿಯ ಅಜ್ಞೆ

ಯನ್ನೂ ಉಲ್ಲಂಘಿಸುವಂತಿಲ್ಲ. ಕೊನೆಗೆ ಪತಿಯಾಜ್ಞೆಯ ಪರಿಪಾಲನೆಯೇ ತನ್ನ ಆದ್ಯ ಕರ್ತವ್ಯವೆಂದರಿತು ನಡೆದ ವೃತ್ತಾಂತವನ್ನೆಲ್ಲಾ ವಿವರಿಸಿದಳು. ಆಶ್ಚರ್ಯಚಕಿತನಾದ ಪರಮದತ್ತನು ಮತ್ತೊಂದು ಹಣ್ಣನ್ನು ಕೇಳಿದನು. ವಿಧಿಯಿಲ್ಲದೆ ಪ್ರಾರ್ಥಿಸಿದ ಪುನಿದವತಿಯ ಕೈಯಲ್ಲಿ ಮತ್ತೊಂದು ಮಾವಿನ ಹಣ್ಣು ಪ್ರತ್ಯಕ್ಷವಾಯಿತು!! ಆದರೆ ಪರಮದತ್ತನ ಕೈಗೆ ಬರುತ್ತಲೇ ಅದು ಮಾಯವಾಯಿತು. ದಿಗ್ಭ್ರಾಂತನಾದ ಪತಿಯು ತನ್ನ ಪತ್ನಿಯು ಸಾಮಾನ್ಯ ಹೆಣ್ಣಲ್ಲವೆಂದೂ ಯಾವುದೋ ದೇವತೆಯಿರಬಹುದೆಂದೂ ಶಂಕಿಸಿ ಆಕೆಯನ್ನು ತ್ಯಜಿಸಲು ನಿರ್ಧರಿಸಿದ. ಅಂದಿನಿಂದ ಆಕೆಯನ್ನು ಪತ್ನಿಯಂತೆ ಕಾಣಲಾರದೆ ಹೋದ.

ಒಂದು ದಿನ ಹಡಗುಗಳನ್ನೆಲ್ಲಾ ಕಟ್ಟಿಕೊಂಡು ಬಹುದೂರದ ದೇಶಕ್ಕೆ ಎಂದಿನಂತೆ ವ್ಯಾಪಾರಕ್ಕಾಗಿ ಹೋದವನು ಮನೆಗೆ ಹಿಂದಿರುಗಲೇ ಇಲ್ಲ. ಬದಲಾಗಿ ಮಧುರೈಗೆ ಹೋಗಿ, ಅಲ್ಲೇ ನೆಲಸಿ ಮತ್ತೊಂದು ಮದುವೆಯಾಗಿ ಒಂದು ಸುಂದರ ಹೆಣ್ಣು ಶಿಶುವಿನ ತಂದೆಯಾದನು. ತನ್ನ ಮೊದಲನೆಯ ಪತ್ನಿಯ ಮೇಲಿದ್ದ ಪೂಜ್ಯ ಭಾವದ ದ್ಯೋತಕವಾಗಿ ಆ ಶಿಶುವಿಗೆ ಪುನಿದವತಿ ಎಂದೇ ಹೆಸರಿಟ್ಟನು.

ಇತ್ತ ಪುನಿದವತಿಯು ಎಂದಿನಂತೆ ಎಲ್ಲಾ ಕೆಲಸಕಾರ್ಯಗಳಲ್ಲಿ ತೊಡಗಿದ್ದಾಳೆ ಹಾಗೂ ಪತಿಯ ಬರುವಿಕೆಗಾಗಿ ಕಾತರಳಾಗಿದ್ದಾಳೆ. ಹೀಗಿರಲು ಪತಿಯ ವಿಷಯ ಕಿವಿಗೆ ಬಿದ್ದ ಪುನಿದವತಿಯು ಒಂದು ದಿನ ಗಾಡಿ ಮಾಡಿಕೊಂಡು ಬಂಧುಬಾಂಧವರೊಡನೆ ಮಧುರೈಗೆ ಬಂದಳು. ಒಂದು ಕ್ಷಣ ಹೆದರಿದ ಪತಿಯು ಸಾವರಿಸಿಕೊಂಡು ಹೆಂಡತಿ, ಮಗಳೊಂದಿಗೆ ಪುನಿದವತಿಯ ಕಾಲಿಗೆರಗಿದನು. ಬೆದರಿದ ಪುನಿದವತಿಯು ಹಿಂದೆ ಸರಿದಳು. ಬಂಧುಗಳು ಪತ್ನಿಗೇ ಏಕೆ ನಮಸ್ಕರಿಸಿದೆಯೆಂದು ಕೋಪದಿಂದ ಕೇಳಲಾಗಿ ಆತನು "ಪುನಿದವತಿಯು ಸಾಮಾನ್ಯ ಹೆಣ್ಣಲ್ಲ. ಒಂದು ದೇವತಾಸ್ತ್ರೀ. ಇದನ್ನರಿತೇ ನಾನು ಆಕೆಯನ್ನು ತ್ಯಜಿಸಿದೆ ಹಾಗೂ ಈ ನನ್ನ ಮಗಳಿಗೆ ಅವಳ ಹೆಸರನ್ನೇ ನೀಡಿರುವೆ" ಎಂದನು. ಗಂಡನಿಗೆ ತನ್ನ ಮೇಲಿದ್ದ ಅಭಿಪ್ರಾಯವು ಈ ರೀತಿ ಬದಲಾದುದನ್ನು ಕಂಡ ಪುನಿದವತಿಯು ಮೇಲೆ ಉಲ್ಲೇಖಿಸಿದ ಪ್ರಾರ್ಥನೆಯನ್ನು ಮಾಡಿದಳು.

ಇನ್ನು ತನ್ನ ಆವಶ್ಯಕತೆಯಿಲ್ಲದಿರುವುದನ್ನು ಕಂಡ ಪುನಿದವತಿಯು ಸಂಸಾರವನ್ನು ತ್ಯಜಿಸಿದಳು. ತನ್ನ ಹೊಸ ಭೂತದ ರೂಪದಲ್ಲಿ ಆನಂದದಿಂದ ಶಿವನನ್ನು ಅರ್ಚಿಸುತ್ತಾ ಹಾಡುಗಳನ್ನು ರಚಿಸುತ್ತ, ಧನ್ಯತಾ ಭಾವದಲ್ಲಿ ಕಾಲಕಳೆಯತೊಡಗಿದಳು. ಆಕೆ ರಚಿಸಿದ ನೂರೊಂದು ಶ್ಲೋಕಗಳ "ಅರ್ಪುದ ತಿರುವಂತಾದಿ", ಇಪ್ಪತ್ತು ಶ್ಲೋಕಗಳುಳ್ಳ "ತಿರು ಇರತ್ತೈ ಮಣಿಮಾಲೈ" ಮುಂತಾದವುಗಳು ಸಾಹಿತ್ಯ ಪ್ರಪಂಚವನ್ನು ಶ್ರೀಮಂತಗೊಳಿಸಿದವು.

ಈಗ ಪುನಿದವತಿಯ ಒಂದೇ ಒಂದು ಬಯಕೆ ಕೈಲಾಸ ಪರ್ವತದಲ್ಲಿ ವೈಭವದಿಂದ ಕುಳಿತಿರುವ ಮಹಾದೇವ ಶಿವನನ್ನು ಕಾಣುವುದು. ಅವಳು ಕೈಲಾಸಪರ್ವತವನ್ನು ತಲುಪಲು ಉತ್ತರದ ಕಡೆ ಯಾತ್ರೆ ಹೊರಟಳು. ದಾರಿಯಲ್ಲಿ ಅವಳ ಬೀಭತ್ಸ ರೂಪವನ್ನು ಕಂಡ ಜನರು ಹೆದರಿ ದೂರ ಸರಿಯುತ್ತಿದ್ದರು. ಅವಳು ಇದಾವುದನ್ನೂ ಲೆಕ್ಕಿಸಲಿಲ್ಲ. "ಜನರಿಗೆ ನಾನು ಹೇಗೆ ಕಾಣಿಸಿಕೊಂಡರೆ ಏನಂತೆ. ಅವರೆಲ್ಲ ಸತ್ಯವನ್ನರಿಯದ ಅಜ್ಞಾನಿಗಳು. ಕೇವಲ ಆ ಪರಮಾತ್ಮನು ನನ್ನನ್ನು ತನ್ನ ಭಕ್ತಳೆಂದು ಸ್ವೀಕರಿಸಿದರೆ ಸಾಕು"—ಎಂದು ಅವಳು ತನಗೆ ತಾನೇ ಹೇಳಿಕೊಂಡಳು.

ಪುನಿದವತಿಯು ಕೈಲಾಸಪರ್ವತವನ್ನು ಕಾಲ್ನಡಿಗೆಯಿಂದ ಹತ್ತಲಿಲ್ಲವಂತೆ—ತನ್ನ ಪಾದಸ್ಪರ್ಶದಿಂದ ಅದು ಅಪವಿತ್ರವಾಗಬಾರದೆಂದು! ಅವಳು ತಲೆಕೆಳಗಾಗಿ ಕೈನಡಿಗೆಯಿಂದಲೇ ಪರ್ವತವನ್ನು ಏರಿದಳೆಂದು ಪ್ರತೀತಿ ಇದೆ. ಭಗವಂತನಾದ ಶಿವನು "ಅಮ್ಮಾ" ಎಂದು ಭಾವಪರವಶತೆಯಿಂದ ಸಂಬೋಧಿಸಿ ಅವಳನ್ನು ಬರಮಾಡಿಕೊಂಡನು. "ನಿನಗೇನು ವರ ಬೇಕು" ಎಂದು ಕೇಳಿದಾಗ, ತನಗಾಗಿ ಏನನ್ನೂ, ಮುಕ್ತಿಯನ್ನೂ ಕೂಡ, ಕೇಳಿಕೊಳ್ಳದೆ, ಭಗವಂತನಲ್ಲಿ ಪರಮ ಭಕ್ತಿಯನ್ನು ಮಾತ್ರ ಬೇಡಿದಳು. ತನ್ನ ಇನ್ನೊಂದು ಬೇಡಿಕೆಯನ್ನು ಅರುಹಿದಳು: "ನೀನು ತಾಂಡವ ನೃತ್ಯ ಮಾಡುವಾಗ ನಿನ್ನ ಪಾದದ ಹತ್ತಿರ ನಿಂತು ಅದನ್ನು ವೀಕ್ಷಿಸುವ ಸೌಭಾಗ್ಯವನ್ನು ನನಗೆ ಕರುಣಿಸು."

"ನೀನು ತಿರುವಾಲಂಗಾಡು(ಚೆನ್ನೈನಿಂದ ಮೂವತ್ತೇಳು ಮೈಲಿ ಪಶ್ಚಿಮಕ್ಕೆ)ವಿನಲ್ಲಿ ನನ್ನ ತಾಂಡವ ನೃತ್ಯವನ್ನು ವೀಕ್ಷಿಸಿ ನನ್ನ ಗುಣಗಾನ ಮಾಡು" ಎಂದು ಮಹಾದೇವ ಶಿವನು ಅವಳನ್ನು ಆಶೀರ್ವದಿಸಿ ಆದೇಶವಿತ್ತನು. ಅವಳು ಕೈಲಾಸದಿಂದ ಹಿಂತಿರುಗಿ ತಿರುವಾಲಂಗಾಡನ್ನು ಪ್ರವೇಶಿಸಿ ನಟರಾಜ ಶಿವನ ತಾಂಡವನೃತ್ಯವನ್ನು ವೀಕ್ಷಿಸುತ್ತ ಅಲ್ಲಿ ಶಾಶ್ವತವಾಗಿ ನೆಲೆಸಿರುವಳೆಂದು ಪ್ರತೀತಿ ಇದೆ. ಸಂಬಂದರ್ ಮುಂತಾದ ಶೈವ ಸಂತರಿಂದ ಗೌರವಿಸಲ್ಪಟ್ಟ ಪುನಿದವತಿಯು ಕಾರೈಕ್ಕಾಲ್ ಅಮ್ಮೈಯಾರ್ ಎಂದು ಪ್ರಸಿದ್ಧಳಾಗಿರುವಳು ಮತ್ತು ಅರವತ್ತಮೂರು ಶೈವ ಸಂತರಲ್ಲಿ ಒಬ್ಬಳಾಗಿರುವಳು.

ಹೀಗೆ ಈ ಅಪ್ರತಿಮ ಶಿವನ ಭಕ್ತಳಾದ ಪುನಿದವತಿಯು ಶಿವನ ಆರಾಧನೆಯಲ್ಲೇ ಜೀವನವನ್ನು ಕಳೆಯುತ್ತಾ ಶಿವಲೋಕವನ್ನು ಸೇರಿದಳು. ಇಂತಹ ದೈವೀಭಕ್ತರ ಸುವಾಸನಾಯುಕ್ತವಾದ ಜೀವನ ಕತೆಯ ಕಂಪು ಭಕ್ತರ ಮೈಮನಗಳಿಗೆ ಹಬ್ಬದೂಟವಲ್ಲವೇ?

ಆಧಾರ: *Women Saints of East and West*

## ಕಾರೈಕ್ಕಾಲ್ ಅಮ್ಮೈಯಾರರ ಪ್ರಾರ್ಥನೆ

ಅಗ್ನಿಹಸ್ತನೂ ರುಂಡಮಾಲಧಾರಿಯೂ ಆದ ನನ್ನ ಪ್ರಭುವು ನನ್ನ ದುಃಖವನ್ನು ನಿವಾರಿಸದಿದ್ದರೂ, ನನ್ನ ಮೇಲೆ ದಯೆ ತೋರದಿದ್ದರೂ, ಮತ್ತು ಕ್ರಮಿಸಬೇಕಾದ ಮಾರ್ಗವನ್ನು ನನಗೆ ತೋರಿಸದಿದ್ದರೂ ನನ್ನ ಹೃದಯ ಅವನನ್ನು ಪ್ರೀತಿಸುವುದನ್ನು ಮಾತ್ರ ಬಿಡುವುದಿಲ್ಲ. ನಾನು ಯಾವಾಗಲೂ ಒಂದು ವಿಷಯವನ್ನು ಮಾತ್ರ ಚಿಂತಿಸುತ್ತೇನೆ, ನಾನು ಮಾಡಬೇಕೆಂದಿರುವುದೂ ಅದನ್ನೇ, ನನ್ನ ಹೃದಯದ ಶ್ರೇಷ್ಠ ನಿಧಿಯಾಗಿ ಇರುವುದೂ ಅದೊಂದೇ—ಅದೇ ಗಂಗಾಧರನೂ ಶಶಿಧರನೂ ಜಟಾಜೂಟನೂ ಜ್ವಾಲಾಗ್ನಿಹಸ್ತನೂ ಆದ ಆ ಪ್ರಭುವಿನ ದಾಸಳಾಗಿರುವುದು.